ದಿನಾಂಕಃ 04.06.2026

ಅಸಲುದಾವಃ 29/2024

ಪಿ.ಡಬ್ಲ್ಯೂ: 2

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ವಾದಿ ನಿಮಗೆ ಹೇಗೆ ಪರಿಚಯ ಎಂದರೆ ಸಾಕ್ಷಿ ನಮ್ಮ ಪಕ್ಕದ ಮನೆಯವರು ಎಂದು ಉತ್ತರಿಸುತ್ತಾರೆ. ಪ್ರತಿವಾದಿ ನಟರಾಜು ರವರು ನನಗೆ ಪರಿಚಯವಿದ್ದಾರೆ, ಅವರ ತಾಯಿ ಪರಿಚಯವಿರುವುದಿಲ್ಲ. ಹಾಗೆಯೇ ಅವರ ಸಹೋದರ ಮತ್ತು ಸಹೋದರಿಯರ ಪರಿಚಯವಿರುವುದಿಲ್ಲ. ನಿಮ್ಮ ಮುಂದೆ ಯಾವುದೇ ವ್ಯವಾಹಾರ ನಡೆದಿಲ್ಲ ಎಂದರೆ ಸಾಕ್ಷಿ ನಟರಾಜು ಅವರು ಈ ಜಮೀನಿನ ವಿಚಾರವಾಗಿ ಬಂದು ನನ್ನ ಬಳಿ ಕೇಳಿಕೊಂಡರು ಎಂದು ಉತ್ತರಿಸುತ್ತಾರೆ. ನಟರಾಜು ಅವರ ಕುಟುಂಬದ ಆಗು ಹೋಗುಗಳ ಬಗ್ಗೆ ನನಗೆ ಗೊತ್ತಿಲ್ಲ, ಅವರು ಒಬ್ಬರು ಮಾತ್ರ ಪರಿಚಯ. ನಟರಾಜು ಅವರ ತಾಯಿ 1 ನೇ ಪ್ರತಿವಾದಿ ಜಯಲಕ್ಷ್ಮಮ್ಮ ಅವರ ತಂದೆಗೆ 2 ನೇ ಹೆಂಡತಿ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ದಾವ ಸ್ವತ್ತನ್ನು ನಾನು ನೋಡಿದ್ದೇನೆ, ಸದರಿ ಸ್ವತ್ತು ಪಿತಾರ್ಜಿತವಾದ ಸ್ವತ್ತು ಎಂದರೆ ಸರಿ. ಈ ಆಸ್ತಿ ಮತ್ತು ಅವರ ಕುಟುಂಬದ ಇತರೆ ಆಸ್ತಿಗಳ ಬಾಬ್ತು ಅವರ ಕುಟುಂಬದಲ್ಲಿ ಯಾವುದೇ ವಿಭಾಗ ಆಗಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಅವರ ಕುಟುಂಬದಲ್ಲಿ ವಿಭಾಗ ಆಗಿರುವುದನ್ನು ಅಥವ ಜಂಟಿಯಾಗಿರುವುದನ್ನು ನೋಡಿದ್ದೀರಾ ಎಂದರೆ ಸಾಕ್ಷಿ ನೋಡಿಲ್ಲ ಎಂದು ಉತ್ತರಿಸುತ್ತಾರೆ. ಕರಾರು ಪತ್ರಕ್ಕೆ ನೀವು ಸಹಿ ಹಾಕುವ ಪೂರ್ವದಲ್ಲಿ ನಟರಾಜು ಅವರನ್ನು ಎಷ್ಟು ದಿನಗಳ ಮೊದಲು ಬೇಟಿ ಮಾಡಿದ್ದೀರಿ ಎಂದರೆ ಸಾಕ್ಷಿ 2 ದಿನಗಳ ಮೊದಲು ಅವರೇ ಬಂದಿದ್ದರು ಎಂದು ಉತ್ತರಿಸುತ್ತಾರೆ. ನೇರವಾಗಿ ಅವರವೇ ಬಂದಿದ್ದರಾ ಅಥವಾ ಬೇರೇಯವರ ಜೊತೆಯಲ್ಲಿ ಬಂದಿದ್ದರಾ ಎಂದರೆ ಸಾಕ್ಷಿ ಅವರೊಬ್ಬರೇ ಬಂದಿದ್ದರು ಎಂದು ಉತ್ತರಿಸುತ್ತಾರೆ. ನಿಮ್ಮ ಮತ್ತು ಅವರ ನಡುವೆ ಯಾವುದೇ ಮಾತುಕತೆ ಆಗಲಿಲ್ಲ ಎಂದರೆ ಸಾಕ್ಷಿ ಇಲ್ಲ, ಜಮೀನಿನ ವ್ಯವಾಹಾರ ನಡೆಯಿತು ಎಂದು ಉತ್ತರಿಸುತ್ತಾರೆ. ಜಮೀನಿನ ವ್ಯವಹಾರ ಮನೆಯ ಹತ್ತಿರವೇ 2021 ರಲ್ಲಿ ನಡೆಯಿತು ದಿನಾಂಕ ಗೊತ್ತಿಲ್ಲ. ಯಾರು ಯಾರು ಸೇರಿದ್ದಿರಿ ಎಂದರೆ ಸಾಕ್ಷಿ ನಟರಾಜು ಮತ್ತು ಅವರ ತಾಯಿ, ನಟರಾಜು ಅವರ ತಮ್ಮ ಬಂದಿದ್ದರು ಎಂದು

ಉತ್ತರಿಸುತ್ತಾರೆ. ಜಮೀನಿನ ವ್ಯಾಪಾರದ ಬಾಬ್ತು ಮಾತುಕತೆಯಾಗಿ ರೂ.20 ಲಕ್ಷಗಳಿಗೆ ಮಾತು ಆಯಿತು ಆ ದಿನ ರೂ.5000/- ಮುಂಗಡ ಹಣ ಕೊಟ್ಟರು. ಆ ಸಮಯದಲ್ಲಿ ಯಾವುದೇ ಬರವಣಿಗೆ ಆಗಿರುವುದಿಲ್ಲ. ಸದರಿ ರೂ.5000/-ಗಳನ್ನು ಲಲಿತರವರು ಕೊಟ್ಟಿರುತ್ತಾರೆ. ಮಾತುಕತೆಯಾದ ಸಮಯದಲ್ಲಿ ದಾಖಲಾತಿಗಳನ್ನು ನೋಡಿದ್ದೇನೆ. ಜಯಮ್ಮನ ಹೆಸರಿಗೆ ಆರ್.ಟಿ.ಸಿ ನೋಡಿದ್ದೇನೆ. ನೀವು ನೋಡಿದ ಆರ್.ಟಿ.ಸಿಯಲ್ಲಿ ಹೆಸರು ಜಯಮ್ಮ ಎಂದೇ ಇತ್ತಾ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನಾನು ಲೇವಾ ದೇವಿ ವ್ಯವಹಾರ ಮಾಡುವುದಿಲ್ಲ ಜಮೀನು ಕೊಡಿಸುತ್ತೇನೆ ಅಷ್ಟೆ ಎಂದು ಉತ್ತರಿಸುತ್ತಾರೆ. ಜಮೀನು ಕೊಡಿಸುವ ವೇಳೆ ಆ ಜಮೀನು ಪಿತಾರ್ಜಿತವೊ ಇಲ್ಲ ಸ್ವಯಾರ್ಜಿತವೋ, ಆದಾರವಾಗಿದೆಯೋ ಇಲ್ಲವೋ ಎಂಬುದನ್ನು ನೋಡಿಯೇ ಕೊಡಿಸುವುದು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನಿವು ಆರ್. ಟಿ.ಸಿ ನೋಡಿರುವುದಾಗಿ ಹೇಳಿದ್ದೀರಿ, ಆ ಕಾಲಕ್ಕೆ ಸದರಿ ಆರ್.ಟಿ.ಸಿಯಲ್ಲಿ ಜಮೀನು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಒಳಗೆರೆಹಳ್ಳಿ ವ್ಯಾಪ್ತಿಯಲ್ಲಿ 2017 ರಲ್ಲಿ ಆದಾರವಾಗಿರುವುದಾಗಿ ನಮೂದಿದೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಹಾಗಾಗಿ ಯಾವುದೇ ಆದಾರವಾಗಿದ್ದ ಜಮೀನನ್ನು ಮೊದಲು ಆದಾರ ರದ್ದು ಪಡಿಸಿಯೇ ಮಾರಾಟದ ಕರಾರು ಮಾಡಿಸಬೇಕು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ದಾವಾ ಜಮೀನು ಈ ಮೇಲೆ ಹೇಳಿದ ಬ್ಯಾಂಕಿನಲ್ಲಿ ಆದಾರವಾಗಿರುವುದನ್ನು ರದ್ದು ಪಡಿಸಿ ಕರಾರು ಮಾಡಿಕೊಡುವಂತೆ ನೀವಾಗಲಿ, ವಾದಿ ಲಲಿತರವರಾಗಲಿ, ಪ್ರತಿವಾದಿಗಳಿಗೆ ಹೇಳಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಒಂದು ಸ್ವತ್ತು ಯಾರಿಗಾದರು ಅಡಮಾನವಾಗಿಲ್ಲದಲ್ಲಿ ಅದನ್ನು ಬೇರೆಯವರಿಗೆ ಮಾರಾಟ ಮಾಡುವ ಹಕ್ಕಿಲ್ಲ ಎಂದರೆ ಸರಿ. ಆ ರೀತಿ ಆದಾರವಾಗಿದ್ದ ಜಮೀನುಗಳನ್ನು ಸಾಮಾನ್ಯವಾಗಿ ಯಾವುದಾದರು ಸಾಲಕ್ಕೆ ಭದ್ರತೆಗಾಗಿ ಕರಾರು ಮಾಡಿಸಿಕೊಳ್ಳುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಒಂದು ವೇಳೆ ಕ್ರಯಕ್ಕೆ ಕರಾರು ಮಾಡಿಕೊಟ್ಟಲ್ಲಿ ಆದಾರವನ್ನು ರದ್ದು ಪಡಿಸಿ ಕರಾರು ಮಾಡಿಸಿಕೊಳ್ಳುತ್ತಾರೆ ಎಂದರೆ ಸರಿ. ನಟರಾಜುರವರು ನಿಮ್ಮ ಬಳಿ ಬಂದು ರೂ.9 ಲಕ್ಷ ಸಾಲ ಬೇಕು ಮಾಸಿಕ ಶೇ.1 ರಂತೆ ಬಡ್ಡಿ ಕೊಡುವುದಾಗಿ ಹೇಳಿನ ಸಾಲ ಕೊಡಿಸಲು ಕೇಳಿಕೊಂಡರು ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಆಗ ನೀವು ಭದ್ರತೆಗಾಗಿ ಕರಾರು ಬರೆದು ಕೊಟ್ಟರೆ ಮತ್ತು ಖಾಲಿ ಪ್ರೊನೋಟ್ ಮತ್ತು ಚೆಕ್ ಕೊಟ್ಟರೆ ಮಾತ್ರ ಹಣ ಈಸಿಕೊಡುತ್ತೇನೆ ಎಂದು ಹೇಳಿ ನಟರಾಜುರವರಿಗೆ ಹೇಳಿದ್ದೀರಿ ಎಂದರೆ ಸಾಕ್ಷಿ ಇಲ್ಲ

ಸುಳ್ಳು ಎಂದು ಉತ್ತರಿಸುತ್ತಾರೆ. ಆಗ ನೀವು ಮತ್ತು ಮಹೇಶ್ ರವನ್ನು ನಟರಾಜುರವರನ್ನು ಅದಕ್ಕೆ ಒಪ್ಪಿಸಿ ನಟರಾಜುರವರ ಖಾತೆಗೆ ಸೇರಿದ 5 ಚೆಕ್ ಗಳು ಮತ್ತು ಅವರ ತಾಯಿ ಖಾತೆಗೆ ಸೇರಿದ 5 ಚೆಕ್ ಗಳು ಮತ್ತು ತಲಾ 5 ಪ್ರೋನೋಟ್ ಗಳನ್ನು ನಿಮ್ಮ ಸಮ್ಮುಖದಲ್ಲಿ ನಟರಾಜುರವರಿಗೆ ಹಣ ಈಸಿಕೊಟ್ಟಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ರೂ.9 ಲಕ್ಷಗಳನ್ನು ಚೆಕ್ ಮೂಲಕ ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಅದು ಯಾವ ಬ್ಯಾಂಕಿನ ಚೆಕ್ ಎಂದು ನೆನಪಿಲ್ಲ. ಒಟ್ಟು 3 ಚೆಕ್ ಗಳನ್ನು ಕೊಟ್ಟಿದ್ದಾರೆ. ಸದರಿ 3 ಚೆಕ್ ಗಳನ್ನು ಸಬ್ ರಿಜಿಸ್ಟರ್ ಅವರ ಸಮಕ್ಷಮ ಕೊಟ್ಟಿದ್ದಾರೆ. ಚೆಕ್ ಗಳನ್ನು ಕರಾರು ಪತ್ರ ನೊಂದಣಿ ಆದಮೇಲೆ ಕೊಟ್ಟಿರುತ್ತಾರೆ. ನಾನು ಮತ್ತು ಮಹೇಶ್ ಅಗ್ರಿಮೆಂಟ್ ಸಮಯದಲ್ಲಿ ಸಹಿ ಮಾಡಿದ್ದೇವೆ. ಅಗ್ರಿಮೆಂಟ್ ಹೊರತು ಪಡಿಸಿ ನೀವು ಬೇರೆ ಯಾವುದೇ ಪತ್ರವನ್ನು ಓದಿ ಸಹಿ ಮಾಡಲಿಲ್ಲ ಎಂದರೆ ಸಾಕ್ಷಿ ಇಲ್ಲ ಓದಲಿಲ್ಲ. ಅಗ್ರಿಮೆಂಟ್ ಅನ್ನೂ ಸಹ ನೀವು ಓದಲಿಲ್ಲ ಹಾಗೇ ಸಹಿ ಮಾಡಿದ್ದೀರಿ ಎಂದರೆ ಸಾಕ್ಷಿ ಇಲ್ಲ, ಓದಿದ್ದೇನೆ ಎಂದು ಉತ್ತರಿಸುತ್ತಾರೆ. ಯಾವ ವಿಚಾರಕ್ಕಾಗಿ 10 ತಿಂಗಳು ಟೈಮ್ ತೆಗೆದುಕೊಂಡಿದ್ದಾರೆ ಎಂದರೆ ಸಾಕ್ಷಿ ಹಣಕಾಸು ಹೊಂದಿಸಿಕೊಳ್ಳಲು ಮತ್ತು ಜಮೀನಿನ ನಕ್ಷೆ ತಯಾರಿಸಲು ಎಂದು ಉತ್ತರಿಸುತ್ತಾರೆ. ಕರಾರಿನಲ್ಲಿ ಹಣಕಾಸು ಹೊಂದಿಸಿಕೊಳ್ಳುವ ವಿಚಾರ ನಮೂದಾಗಿಲ್ಲ ಎಂದರೆ ಸಾಕ್ಷಿ ಹೌದು, ಸ್ಕೆಚ್ ಮಾಡಿಸುವ ವಿಚಾರ ನಮೂದಿಸಿದ್ದಾರೆ ಎಂದು ಉತ್ತರಿಸುತ್ತಾರೆ.

2. ನೀವು ಜಮೀನು ಕೊಡಿಸುವ ಮತ್ತು ಮಾರಾಟ ಮಾಡವ ಕೆಲಸ ಮಾಡುವುದಾಗಿ ಹೇಳಿದ್ದೀರಿ, ಯಾವ ಯಾವ ಜಮೀನುಗಳಿಗೆ ಸ್ಕೆಚ್ ಅವಶ್ಯಕತೆ ಇದೆ ಮತ್ತು ಯಾವ ಯಾವ ಜಮೀನುಗಳಿಗೆ ಸ್ಕೆಚ್ ಅವಶ್ಯಕತೆ ಇಲ್ಲ ಎಂಬ ಬಗ್ಗೆ ನಿಮಗೆ ಗೊತ್ತಿದೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಸರ್ವೆ ನಂ.13/5 ದಾವಾ ಆಸ್ತಿ ಪೂರ್ತಿ ಕ್ರಯ ಆಗಬಹುದಾದ ಜಮೀನು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಸದರಿ ಜಮೀನಿನ 11-ಇ ನಕ್ಷೆಯ ಅವಶ್ಯಕತೆ ಇಲ್ಲ ಎಂದರೆ ಸಾಕ್ಷಿ ಅವಶ್ಯಕತೆ ಇಲ್ಲ ಆದರೆ ಸದರಿ ಜಮೀನಿನ ವಹಿವಾಟಿನಲ್ಲಿ ವ್ಯತ್ಯಾಸ ಬರುವ ಸಾಧ್ಯತೆ ಇರತ್ತದೆ ಹಾಗಾಗಿ ಅಳತೆ ಆಗಬೇಕು ಎಂದು ಉತ್ತರಿಸುತ್ತಾರೆ. ಸದರಿ ದಾವಾ ಜಮೀನಿನ 11-ಇ ನಕ್ಷೆಯ ಅವಶ್ಯಕತೆ ಇರುವುದಿಲ್ಲ, ರೂ.9 ಲಕ್ಷಗಳ ಸಾಲದ ಹಣದ ಭದ್ರತೆಗಾಗಿ ನೀವು ಮತ್ತು ಮಹೇಶ್ ಸೇರಿ ಕ್ರಯದ ಕರಾರು ಮಾಡಿಸಿಕೊಟ್ಟಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ.

3. ಸಬ್ ರಿಜಿಸ್ಟರ್ ಅವರ ಮುಂದೆ 3 ಚೆಕ್ ಕೊಟ್ಟ ನಂತರ ನೀವು ಕರಾರಿಗೆ ಸಹಿ ಹಾಕಿದ ಬಳಿಕ ನೀವು ಮತ್ತು ಮಹೇಶ್ ರವರು ಪ್ರತಿವಾದಿಗಳನ್ನು ಬೇಟಿಯಾಗಿಲ್ಲ ಎಂದರೆ ಸಾಕ್ಷಿ ಕರಾರು ಬಳಿಕ ಬೇಟಿಯಾಗಿಲ್ಲ ಎಂದು ಉತ್ತರಿಸುತ್ತಾರೆ. ವಾದಿ ಲಲಿತರವರನ್ನು ಬೇಟಿಯಾಗಿರುತ್ತೇನೆ. ಯಾವ ವಿಚಾರವಾಗಿ ಬೇಟಿಯಾಗಿರುತ್ತೀರಿ ಎಂದರೆ ಸಾಕ್ಷಿ ಈ ಜಮೀನಿನ ವಿಚಾರವಾಗಿ ಎಂದು ಉತ್ತರಿಸುತ್ತಾರೆ. ಈ ಕರಾರು ಆದ ಬಳಿಕ ನಟರಾಜುರವರು ಪ್ರತಿ ತಿಂಗಳು ಶೇ.1 ರಂತೆ ಬಡ್ಡಿ ಕೊಡುತ್ತಾ ಬಂದಿದ್ದಾರೆ, ಈ ವಿಚಾರ ಗೊತ್ತಾ ಇಲ್ಲವಾ ಎಂದರೆ ಸಾಕ್ಷಿ ಬಡ್ಡಿಗಾಗಿ ಈ ಜಮೀನಿನ ವ್ಯವಹಾರ ನಡೆದಿಲ್ಲ ಎಂದು ಉತ್ತರಿಸುತ್ತಾರೆ. ನಟರಾಜುರವರು ಈ ರೀತಿ ಬಡ್ಡಿ ಕೊಡುತ್ತಿದ್ದೇನೆ ಎಂದು ನಿಮ್ಮ ಬಳಿ ಅಥವಾ ಮಹೇಶ್ ಅವರ ಬಳಿ ಎಂದಾದರು ಹೇಳಿದ್ದಾರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಟರಾಜುರವರು ಪೋನ್ ಪೇ ಮುಖಾಂತರ ವಾದಿ ರವರ ಅಥವಾ ಅವರ ಯಜಮಾನರ ಖಾತೆಗೆ ಹಣ ಹಾಕಿದ್ದಾರೆ ನಿಮಗೇನಾದರು ಗೊತ– ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಈ ವಿಚಾರ ವನಿುಗೆ ಗೊತ್ತಿದ್ದರೂ ಸಹ ಸಾಧ್ಯವಾರದೆ ವಾದಿಗೆ ಸಹಾಯ ಮಾಡಬೇಕು ಎಂದು ಮೇಲಿನ ರೀತಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ.

4. ದಾವಾ ಜಮೀನಿನ ಅಕ್ಕ ಪಕ್ಕ ಚೆಕ್ಕುಬಂದಿ ಹೇಳಬಹುದಾ ಎಂದರೆ ಸಾಕ್ಷಿ ಚೆಕ್ಕುಬಂದಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಕ್ರಯದ ಕರಾರು ಪತರ ಮಾಡಿಕೊಟ್ಟ ಕಾಲಕ್ಕೆ ನಟರಾಜು ಅವರ ತಂದೆಯ 1 ನೇ ಹೆಂಡತಿಯ ಮಕ್ಕಳು ಇದ್ದಾರೆ ಎಂದು ನಿಮಗೆ ಗೊತ್ತಿತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಜಮೀನು ಕೊಡಿಸುವ ಕಾಲಕ್ಕೆ ಅವರ ಕುಟುಂಬದ ವಂಶ ವೃಕ್ಷ ಪಡೆದುಕೊಳ್ಳಲು ಪ್ರಯತ್ನ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಪಿತಾರ್ಜಿತ ಆಸ್ತಿಯಾಗಿರುವುದರಿಂದ ನಟರಾಜು ಅವರ ತಂದೆಯ ಮೊದಲನೇ ಹೆಂಡತಿಯ ಮಕ್ಕಳಿಗೂ ಹಕ್ಕಿದೆ ಎಂದರೆ ಸರಿ. ಹಾಗಾಗಿ ಮೊದಲನೇ ಹೆಂಡತಿಯ ಮಕ್ಕಳನ್ನು ಬಿಟ್ಟು ದಾವ ಸ್ವತ್ತನ್ನು ಮಾರಾಟ ಮಾಡಲು ಹಕ್ಕಿಲ್ಲ ಎಂದರೆ ಸರಿ. ರೂ.9 ಲಕ್ಷಗಳ ಸಾಲದ ಭದ್ರತೆಗೋಸ್ಕರ ನಾಮಕಾವಸ್ತೆಗಾಗಿ ಕ್ರಯದ ಕರಾರನ್ನು ಮಾಡಿಸಿಕೊಂಡಿದ್ದಾರೆ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ.

5. ಪ್ರಮಾಣ ಪತ್ರದ ಅಂಶಗಳನ್ನು ಯಾರು ಹೇಳಿ ಬರೆಸಿದರು ಎಂದರೆ ಸಾಕ್ಷಿ ಲಲಿತರವರು ಎಂದು ಉತ್ತರಿಸುತ್ತಾರೆ. ಅವರು ಹೇಳಿ ಬರೆಸಿರುವುದನ್ನು ಹೊರತು ಪಡಿಸಿ ಉಳಿದ ಯಾವುದೇ ವಿಚಾರಗಳು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಹಾಗಾಗಿ ವಾದಿಯ ಮಾತು ಕೇಳಿ ಸಾಧ್ಯವಾದರೆ ಹೆಚ್ಚಿನ ಹಣವನ್ನು ಪಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯಾ ನುಡಿಯುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

(ಶ್ರೀಮತಿ.ಹರಿಣಿ.ಎಂ.ಎಸ್.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.